ಕಥೆ

# ಬೆಕ್ಕಿನ ಕಣ್ಣು




## ಗೀತಾ ಕುಂದಾಪುರ

ಕಲೆ: ರೂಪಶ್ರೀ ಕಲ್ಲಿಗನೂರು




'ಎದ್ದೂ.... ಬಾರೇ ಇಲ್ಲಿ, ಬಿ.ಪಿ ಮಾತ್ರೆ ತಗೊ, ಏಕೆ ಸುಮ್ಮನೆ ಟೆನ್ಷನ್ ಮಾಡ್ಕೋತಿಯಾ' ಎನ್ನುತ್ತಾ ಮಾತ್ರೆ ಮತ್ತು ನೀರನ್ನು ಕೈಗೆ ಕೊಟ್ಟ ಪ್ರಭುವನ್ನೇ ದೃಷ್ಟಿಸಿ ನೋಡಿದೆ. ಅವನ ಕಣ್ಣಿನಲ್ಲಿ ಪ್ರೀತಿ ಸೂಸುತ್ತಿತ್ತು, ಯಾವತ್ತೂ ಒಪ್ಪವಾಗಿರುತ್ತಿದ್ದ ಕ್ರಾಪು ಕೆದರಿ ಕೂದಲು ಮುಖದಲ್ಲಿ ಹರಡಿತ್ತು, ಶೇವ್ ಮಾಡಿಕೊಳ್ಳದೆ ಒಂದೆರಡು ದಿನವಾಗಿರಬೇಕು, ಮುಖದಲ್ಲಿ ಕಪ್ಪು, ಬಿಳಿ ಕೂದಲಿನ ಕಳೆ ಹುಲುಸಾಗಿ ಬೆಳೆದಿತ್ತು. 'ಒಳ್ಳೆಯವನೇ, ಹೆಂಡತಿಯ ಮೇಲೆ ಪ್ರೀತಿ, ಕಾಳಜಿ ಇದೆ' ಮನಸ್ಸು ಉಸುರಿತು, 'ಪೂರ್ತಿ ನಂಬಿ ಕೆಡಬೇಡ' ಎಂದು ಮತ್ತೊಂದು ಮನಸ್ಸು ಚೀರಿತು.

ಸೆಕೆ ಎನಿಸಿ ಎ.ಸಿ. ಆನ್ ಮಾಡಿ ಬೇಗ, ಬೇಗನೆ ಫ್ಯಾಕ್ಟರಿಗೆ ಹೊರಡಲು ರೆಡಿಯಾಗುತ್ತಿರಬೇಕಾದರೆ ಆಗಾಗ ಕಾಡುವ ತಲೆನೋವು ಮತ್ತೆ ಹಣಕಿತು, ಅಲ್ಲೇ ಕುರ್ಚಿಯಲ್ಲಿ ಕುಳಿತೆ. ಕೂಡಲೆ ಪ್ರಭು ಅಮೃತಾಂಜನವನ್ನು ಹಣೆಗೆ ಮೃದುವಾಗಿ ಉಜ್ಜಿದ, ಹಾಯ್ ಎನಿಸಿತು. ನಾನು ಕಣ್ಣು ಮುಚ್ಚಿದ್ದನ್ನು ನೋಡಿ ಕೂದಲಿನ ಸಿಕ್ಕನ್ನು ತೆಗೆದು ನಯವಾಗಿ ಬಾಚತೊಡಗಿದ. 'ಬಿಡ್ರಿ... ನಾನೇ ಬಾಚಕೋತಿನಿ' ಅವನ ಕೈಯಿಂದ ಬಾಚಣಿಗೆಯನ್ನು ಕಿತ್ತುಕೊಂಡೆ. ನೀಳ ಕನ್ನಡಿಯಲ್ಲಿ ಕಂಡಾಗ ತಲೆಯಲ್ಲಿ ಹಣಕಿದ ಒಂದೆರಡು ಬಿಳಿ ಕೂದಲು ವಯಸ್ಸು ನಲವತ್ತಾಯಿತು ಎಂದು ಎಚ್ಚರಿಸಿತು. ಹಿಂದೆ ನಿಂತಿದ್ದ ಪ್ರಭುವಿನ ಮುಖವೂ ಕನ್ನಡಿಯಲ್ಲಿ ಕಾಣಿಸಿತು, ಅವನ ಕಣ್ಣಿನಲ್ಲಿದ್ದ ಗಲಿಬಿಲಿಯನ್ನು ಓದಿದೆ. 'ಛೇ ಎಷ್ಟೊಂದು ಬದಲಾಗಿದ್ದಾನೆ ಪ್ರಭು, ಪರಿಸ್ಥಿತಿ ಎಲ್ಲರನ್ನೂ, ಎಲ್ಲವನ್ನೂ ಬದಲಾಯಿಸುತ್ತದೆ' ಎನಿಸಿತು. ನಾನೂ ಮದುವೆಯಾಗಿ ದೊಡ್ಡ ಮನೆಗೆ ಕಾಲಿಟ್ಟಾಗ ಹೀಗೆ ಗಲಿಬಿಲಿಗೊಳ್ಳುತ್ತಿರಲಿಲ್ಲವೇ? ಎಲ್ಲಿ ತಪ್ಪಾಗುತ್ತದೋ ಎನ್ನುವ ಗೊಂದಲದಿಂದ ಗಾಬರಿಯಾಗುತ್ತಿದ್ದೆ.

'ಪ್ರಭಾಕರ', ಎಲ್ಲರೂ ಮುದ್ದಿನಿಂದ ಕರೆಯುತ್ತಿದ್ದ 'ಪ್ರಭು'ವಿನ ತಂದೆ ಬೆಂಗಳೂರಿನಲ್ಲಿ ದೊಡ್ಡ ಕುಳ. ಸ್ಟೀಲ್ ಪಾತ್ರೆಗಳನ್ನು ತಯಾರಿಸುವ ಫ್ಯಾಕ್ಟರಿ ಇತ್ತು. ಪ್ರಭುವಿನ ಅಕ್ಕಂದಿರು ಮದುವೆಯಾಗಿ ಬೇರೆ ಊರಿನಲ್ಲಿದ್ದರೆ, ಬಿ.ಕಾಂ. ಮುಗಿಸಿದ ಪ್ರಭು ಫ್ಯಾಕ್ಟರಿಯಲ್ಲಿ ತಂದೆಗೆ ಸಹಾಯ ಮಾಡುತ್ತಿದ್ದ. ಡಿಗ್ರಿ ಮುಗಿಸಿ ಹಳ್ಳಿಯಲ್ಲೇ ಸ್ಕೂಲ್ ಟೀಚರ್ ಆಗಿದ್ದೆ ನಾನು. ಪ್ರಭುವಿನ ಸಂಬಂಧ